UNIVERSAL LIBRARY
OU_200460
UNIVERSAL LIBRARY

# ಸುವರ್ಣಸುಂದರಿ

# SUVARNA SUNDARI

**An Adaptation of "The Golden Touch"**

BY

**L. SWAMI RAO, B.A.,**

*Sub-Editor, Mysore Economic Journal*
*Formerly Head-master Hindu A V School,*
*Author of Susila, Balamanorama, etc.*

**Revised Edition-1,000 Copies**

1918

ಇದರ ಹಕ್ಕು ಗ್ರಂಥಕರ್ತರದು.] [ಕ್ರಯ ೨ ಆ

ಬೆಂಗಳೂರು ಸಿಟಿ

ಕೆ. ಎಸ್. ಕೃಷ್ಣಯ್ಯರ್, ಬಿ. ಎ ಯವರ

'ಏರಿಷ್' ಮುದ್ರಾಲಯದಲ್ಲಿ ಮುದ್ರಿಸಲ್ಪಟ್ಟಿತು.

# ಸುವರ್ಣಸುಂದರಿ

## ಒಂದನೆಯ ಪ್ರಕರಣ.

ಸುವರ್ಣಾವತಿಯಲ್ಲಿ ಸುವರ್ಣಶೇಖರನೆಂಬ ಅರಸನಿದ್ದನು ಅವನಿಗೆ ಒಬ್ಬಳೇ ಮಗಳು ಆ ಮಗಳನ್ನು ಕಂಡರೆ ಸುವರ್ಣಶೇಖರನಿಗೆ ಬಹು ಪ್ರೀತಿ ಆದರೆ ಮಗಳಿಗಿಂತಲೂ ಅಧಿಕವಾಗಿ ಆತನು ಚಿನ್ನವನ್ನು ಪ್ರೀತಿಸುತ್ತಿದ್ದನು ಚಿನ್ನದಲ್ಲಿ ವಿನಾ ಮತ್ತಾವುದರಲ್ಲಿಯೂ ಆತನಿಗೆ ಹೆಚ್ಚು ಅಭಿಲಾಷೆಯೇ ಇರಲಿಲ್ಲ ಸುವರ್ಣವೆಂಬ ಶಬ್ದವು ಕಿವಿಗೆ ಬಿದ್ದ ಕೂಡಲೆ ಸುವರ್ಣಶೇಖರನಿಗೆ ಹರ್ಷವು ಉಕ್ಕಿ ಉಕ್ಕಿ ಬರುತ್ತಿದ್ದಿತು ಇದಕ್ಕೆ ಸರಿಯಾಗಿ ಅವನಿಗೆ ಅಪರಿಮಿತವಾದ ಐಶ್ವರ್ಯವೂ ಇದ್ದಿತು

ಸುವರ್ಣಶೇಖರನ ಮಗಳು ಸದಾ ತಂದೆಯ ಸಮೀಪದಲ್ಲಿಯೇ ಆಟಪಾಟಗಳನ್ನಾಡುತ್ತ ಕಾಲವನ್ನು ಕಳೆಯುತ್ತಿದ್ದಳು ಈ ಮುದ್ದುಗುವರಿಯಲ್ಲಿ ಪ್ರೇಮವು ಹೆಚ್ಚಿದಹಾಗೆಲ್ಲಾ ಅರಸನಿಗೆ ಐಶ್ವರ್ಯದಲ್ಲಿ ಆಸೆಯೂ ಹೆಚ್ಚುತ್ತ ಹೋಯಿತು

ಅಯ್ಯೋ ಪಾಪ ! ಸುವರ್ಣಶೇಖರನು ತಾಯಿಯಿಲ್ಲದ ಮಗಳಿಗೆ ಏನು ಮಾಡಿಯಾನು ? ಮುದ್ದುಗುವರಿ ಸುಖ ಸಂತೋಷದಿಂದ ಕಾಲವನ್ನು ಕಳೆಯುತ್ತಿದ್ದರೆ ಆತನಿಗೆ ಎಷ್ಟೋ ತೃಪ್ತಿ. ಮಗಳು ಸದಾ ಸುಖಿಯಾಗಿರಬೇಕಾದರೆ ತಾನು ಲೆಕ್ಕವಿಲ್ಲದಷ್ಟು ಸವರನ್ನುಗಳನ್ನು ಕೂಡಿಹಾಕಿ ಅವಳಿಗೆ ಕೊಡಬೇಕಾದುದಾವಶ್ಯಕವೆಂದು ಯೋಚಿಸಿದನು ಯೋಚನೆಗೆ ತಕ್ಕಹಾಗೆ

ತನ್ನ ಕಾಲವನ್ನೆಲ್ಲಾ ಚಿನ್ನದರಾಶಿಯನ್ನು ಕೂಡಿಹಾಕುವುದರಲ್ಲಿಯೇ ಕಳೆಯುತ್ತಿದ್ದನು. ಆಕಾಶವು ಹಳದಿಯ ಬಣ್ಣವಾಗಿ ಕಂಡರೆ, "ಅಯ್ಯೋ! ಇದು ಚಿನ್ನವಾಗಬಾರದಾಗಿತ್ತೆ! ನನ್ನ ಪೆಟ್ಟಿಗೆಯಲ್ಲಿ ಇಟ್ಟುಕೊಳ್ಳುವುದಕ್ಕೆ ಸಾಧ್ಯವಾಗಿದ್ದರೆ ಎಷ್ಟು ಚೆನ್ನಾಗಿತ್ತು!" ಎನ್ನುತ್ತಿದ್ದನು. ಮುದ್ದುಮಗಳು ತೋಟದಿಂದ ಒಂದೆರಡು ಹಳದಿಯ ಹೂವನ್ನು ತಂದರೆ, ಅದನ್ನು ನೋಡಿ ಸುವರ್ಣಶೇಖರನು "ಚಿಃ! ಚಿಃ! ಎಂಗುವೆ, ಈ ಹೂಗಳು ವರ್ಣಕ್ಕೆ ತಕ್ಕಂತೆ ಸುವರ್ಣವಾಗಿಯೇ ಇದ್ದಿದ್ದರೆ, ಕಿತ್ತುದಕ್ಕೆ ಸಾರ್ಥಕವಾಗುತ್ತಿದ್ದಿತು. ಈಗ ಇವುಗಳಿಂದ ಪ್ರಯೋಜನವೇನು?" ಎಂದು ನಿಟ್ಟುಸಿರು ಬಿಡುತ್ತಿದ್ದನು.

ಈ ಬಗೆಯ ಹುಚ್ಚು ಹಿಡಿಯುವುದಕ್ಕೆ ಮುಂಚೆ ಸುವರ್ಣಶೇಖರನಿಗೆ ಹೂ ಕಂಡರೆ ವಿಶೇಷಪ್ರೀತಿ. ಇದಕ್ಕಾಗಿ ಆತನು ಅದ್ವಿತೀಯವಾದ ತೋಟವನ್ನು ಮಾಡಿಸಿ ಅದರಲ್ಲಿ ದೊಡ್ಡವಾಗಿಯೂ, ಅಂದವಾಗಿಯೂ, ಪರಿಮಳಯುಕ್ತವಾಗಿಯೂ ಇರುವ ಗುಲಾಬಿ ಹೂವಿನ ಗಿಡಗಳನ್ನು ಯಥೇಷ್ಟವಾಗಿ ಹಾಕಿಸಿದ್ದನು. ಸುವರ್ಣಶೇಖರನು ತನಗೆ ವಿರಾಮ ಸಿಕ್ಕಿದಾಗಲೆಲ್ಲಾ ಆ ತೋಟದಲ್ಲಿರುವ ಹೂಗಳನ್ನು ನೋಡುವುದರಲ್ಲಿಯೂ, ಅವುಗಳ ವಾಸನೆಯನ್ನು ಆಘ್ರಾಣಿಸುವುದರಲ್ಲಿಯೂ ಕಾಲ ಕಳೆದು ತೃಪ್ತನಾಗುತ್ತಿದ್ದನು.

ಹೀಗೆ ಸುವರ್ಣಶೇಖರನು ಆ ತೋಟವನ್ನು ನೋಡಿದಾಗಲೆಲ್ಲಾ ಅಲ್ಲಿರುವ ಹೂಗಳ ಒಂದೊಂದು ರೇಖೂ ಚಿನ್ನದ ರೇಖಾಗಿಯೂ, ಗುಲಾಬಿ ಪುಷ್ಪಗಳೆಲ್ಲವೂ ಸುವರ್ಣದ ಪುಷ್ಪಗಳಾಗಿಯೂ ಇದ್ದರೆ ತೋಟದ ಬೆಲೆ ಎಷ್ಟಾಗುತ್ತಿದ್ದಿತು ಎಂಬ ಲೆಕ್ಕಾಚಾರವನ್ನು ಹಾಕುತ್ತಿದ್ದನು. ಸುವರ್ಣಶೇಖರನಿಗೆ ಸಂಗೀತದಲ್ಲ ಅಭಿರುಚಿಯಿದ್ದರೂ, ಈಗ ಆತನಿಗೆ ಸುವರ್ಣನಾಣ್ಯಗಳು ಒಂದ

ಕ್ಕೊಂದು ತಗಲುವುದರಿಂದ ಹುಟ್ಟುವ ಶಬ್ದ ಹೊರತು ಮತ್ತಾ ವುದೂ ಬೇಕಾಗಿರಲಿಲ್ಲ

ಆಶಾಪಾಶಕ್ಕೆ ಸಿಕ್ಕಿದ ಸುವರ್ಣಶೇಖರನಿಗೆ ಮನಸ್ಸಿನ ಸ್ಥಿತಿಯೇ ಬದಲಾಯಿಸಿ ಹೋಯಿತು ಚಿನ್ನವನ್ನು ಏನಾ ಮತ್ತಾವುದನ್ನಾದರೂ ಮುಟ್ಟಬೇಕೆಂದರೆ ಅವನಿಗೆ ಮನಸ್ಸು ಬರು ತ್ತಿರಲಿಲ್ಲ ಅಂತಹ ಪದಾರ್ಥಗಳನ್ನು ತಲೆಯೆತ್ತಿ ನೋಡಬೇಕೆಂ ದರೂ ಅವನಿಗೆ ಜುಗುಪ್ಸೆಯಾಗುತ್ತಿದ್ದಿತು ಈ ಬಗೆಯ ಹುಚ್ಚು ಹಿಡಿದಮೊದಲು ಸುವರ್ಣಶೇಖರನು ತನ್ನ ಅರಮನೆಯ ನೆಲಮಾಳಿಗೆ ಯಲ್ಲಿದ್ದ ಗಾಢಾಂಧಕಾರವಾದ ಕೊಠಡಿಯಲ್ಲಿಯೇ ಹೆಚ್ಚು ಕಾಲ ವನ್ನು ಕಳೆಯುತ್ತಿದ್ದನು ಆತನ ಐಶ್ವರ್ಯವೆಲ್ಲವೂ ಆ ಕೊಠಡಿ ಯಲ್ಲಿದ್ದಿತು ಸಂತೋಷಪಡಬೇಕೆಂದು ತನಗೆ ತೋರಿದಾಗಲೆಲ್ಲಾ ಆ ಕೊಠಡಿಗೆ ಹೋಗಿ, ಪೆಟ್ಟಿಗೆಗಳ ಬಾಗಿಲುಗಳನ್ನು ತೆಗೆದು, ಸುವ ರ್ಣದ ನಾಣ್ಯಗಳನ್ನೆಲ್ಲಾ ರಾಶಿಹಾಕಿಕೊಂಡು ಅದರಲ್ಲಿಯೇ ತನ್ನ ಕಯ್ಗಳನ್ನು ಆಡಿಸುತ್ತಿದ್ದನು ಇದೂ ಅಲ್ಲದೆ, ತನ್ನ ಕಯ್ಗೆ ಸಿಕ್ಕಿದ ಚಿನ್ನದ ಪ್ರತಿಯೊಂದು ಪದಾರ್ಥವನ್ನೂ ಕೊಠಡಿಯೊಳಕ್ಕೆ ಬಂದು ರಂಧ್ರಮೂಲಕ ಬೀಳುತ್ತಿದ್ದ ಸೂರ್ಯನ ರಶ್ಮಿಯ ಬೆಳ ಕಿಗೆ ಪದೇಪದೇ ತಂದು ಹಿಡಿದು ಅದರ ಪ್ರಕಾಶವನ್ನು ನೋಡಿ ಆನಂದಿಸುತ್ತಿದ್ದನು ಇಂತಹ ಆನಂದಕ್ಕೆ ಕಾರಣವಾಗಿದ್ದ ಸೂರ್ಯ ರಶ್ಮಿಯನ್ನು ಮಾತ್ರ ಅವನು ಶ್ಲಾಘನೆ ಮಾಡುತ್ತಿದ್ದನು, ಏಕೆಂದರೆ, ಇದಿಲ್ಲದಿದ್ದರೆ ಅವನ ಸುವರ್ಣಕ್ಕೆ ಹೆಚ್ಚಿನ ಕಾಂತಿ ಇರು ತ್ತಿರಲಿಲ್ಲ ಇದಾದಮೇಲೆ ಚೀಲದಲ್ಲಿರುವ ನಾಣ್ಯಗಳನ್ನು ಕೆಳಕ್ಕೆ ಸುರಿದು ಸುಮ್ಮನೆ ಎಣಿಸುತ್ತಿದ್ದನು ಇದೂ ಬೇಜಾರಾದರೆ ಒಂದು ಚಿನ್ನದ ಶಲಾಕೆಯನ್ನು ತೆಗೆದುಕೊಂಡು ಮೇಲಕ್ಕೆ ಎಸೆ ಯುವುದು, ಹಿಡಿದುಕೊಳ್ಳುವುದು, ಪುನಃ ಎಸೆಯುವುದು, ಹಿಡಿದು ಕೊಳ್ಳುವುದು—ಹೀಗೆ ಮಾಡುತ್ತಿದ್ದನು. ಅದೂ ಸಾಕಾದರೆ

ಚಿನ್ನದ ಪಾತ್ರೆಯನ್ನು ತೆಗೆದುಕೊಂಡು ಮುಖವನ್ನು ನೋಡಿ ಕೊಳ್ಳುತ್ತ, ಅದರ ಮೆರಗಿನ ಹೊಳಪಿಗೆ ಮುಖವು ಕಂಡಾಗಲೆಲ್ಲ "ಎಲಾ, ಸುವರ್ಣಶೇಖರನೆ! ಎಷ್ಟು ಸುಖಿಯೋ ನೀನು!" ಎಂದು ತನ್ನಷ್ಟಕ್ಕೆ ತಾನೇ ಅಂದುಕೊಳ್ಳುತ್ತಿದ್ದನು ಇವನು, ಹಲ್ಲು ಕಿರಿದಾಗಲೆಲ್ಲಾ ಪಾತ್ರೆಯಲ್ಲಿ ಕಾಣುವ ಪ್ರತಿಬಿಂಬವೂ ಹಲ್ಲು ಕಿರಿದು ನಗುತ್ತಿದ್ದಿತು ಇದನ್ನು ನೋಡಿದರೆ ಸುವರ್ಣ ಶೇಖರನ ದಡ್ಡತನವನ್ನು ತಿಳಿದು ಆತನನ್ನು ಅಣಕಿಸಬೇಕೆಂದು ಆ ಪಾತ್ರೆಯು ಪ್ರಯತ್ನಪಡುವಂತೆ ಕಾಣುತ್ತಿದ್ದಿತು

ಸುವರ್ಣಶೇಖರನೇನೋ ಸುಖಪುರುಷನೆಂದು ಅಂದು ಕೊಳ್ಳುತ್ತಿದ್ದರೂ ತನ್ನ ಮನಸ್ಸಿಗೆ ತೃಪ್ತಿಯಾಗುವಷ್ಟು ಸುಖವಾಗಿ ರಲಿಲ್ಲವೆಂದು ಅಸಮಾಧಾನವಾಗಿದ್ದನು

## ಎರಡನೆಯ ಪ್ರಕರಣ.

ಸುವರ್ಣಶೇಖರನು ಪದ್ಧತಿಯ ಪ್ರಕಾರ ಒಂದು ದಿನ ಕೊಠಡಿ ಯಲ್ಲಿ ಬಾಗಿಲುಗಳನ್ನು ಹಾಕಿಕೊಂಡು, ಸುವರ್ಣದ ರಾಶಿಯ ನಡುವೆ ಕುಳಿತು ಬಹು ಸಂಭ್ರಮದಿಂದಿರುವಾಗ, ಅಲ್ಲಿ ಏನೋ ಒಂದು ನೆರಳು ಕಂಡಿತು ಕೂಡಲೆ ಸುವರ್ಣಶೇಖರನು ಧಿಗ್ಗನೆದ್ದು ತಲೆಯನ್ನೆತ್ತಲು ಸೂರ್ಯರಶ್ಮಿಯ ಬೆಳಕಿನಲ್ಲಿ ಯಾರೋ ಅಪರಿಚಯಸ್ಥನೊಬ್ಬನು ನಿಂತಿರುವಂತೆ ಕಾಣಿಸಿತು ಆತನು ಇನ್ನೂ ಪ್ರಾಯಸ್ಥನು, ಹಸನ್ಮುಖಿ ಸುವರ್ಣಶೇಖರನಿಗೆ ಏನೂ ತೋರದು. ಅವನಿಗೆ ಸುವರ್ಣದ ಚಿಂತೆಯೇ ಸಂಪೂರ್ಣ ವಾಗಿ ಆವರಿಸಿರುವುದರಿಂದ ಆ ಅಪರಿಚಯಸ್ಥನ ಹಸನ್ಮುಖದ ಭಾವ ದಲ್ಲಿಯೂ ಕೂಡ ಆ ಚಿನ್ನದ ಕಾಂತಿಯೇ ತೋರುತ್ತಿದೆ ಇದೇನು, ಆಶ್ಚರ್ಯ ಆತನು ಸೂರ್ಯರಶ್ಮಿಗೆ ಅಡ್ಡಲಾಗಿ ನಿಂತಿದ್ದರೂ

ಕೊಠಡಿಯ ಪ್ರಕಾಶವು ಬಹಳವಾಗಿದೆ ! ಸುವರ್ಣದ ರಾಶಿಯೆಲ್ಲವೂ ಮತ್ತಷ್ಟು ಹೆಚ್ಚಾಗಿ ಥಳಥಳಿಸುತ್ತಿದೆ ! ಒಂದೊಂದು ಮೂಲೆಯಲ್ಲಿಯೂ ಬೆಳಕು ಬಿದ್ದು ಪ್ರಕಾಶಮಾನವಾಗಿದೆ ! ಈತನು ನಕ್ಕರೆ ಕೂಡಲೆ ಉರಿಯುವ ಕೊಳ್ಳಿಯಂತೆ ಪ್ರಕಾಶವು ಮತ್ತಷ್ಟು ಹೆಚ್ಚುವುದು !

ಇದನ್ನು ನೋಡಿ ಸುವರ್ಣಶೇಖರನು ದಿಗ್ಭ್ರಮೆ ಹಿಡಿದವನಾದನು ಬಾಗಿಲನ್ನು ಗಟ್ಟಿಯಾಗಿ ಹಾಕಿ ಬೀಗಹಾಕಿದ್ದೇನೆ. ಮನುಷ್ಯನಿಗೆ ಎಷ್ಟುಮಾತ್ರಕ್ಕೂ ಬಾಗಿಲನ್ನು ತಳ್ಳಿ ಒಳಗೆ ಬರುವುದಕ್ಕೆ ಸಾಧ್ಯವಾಗುವಂತಿಲ್ಲ ಹೀಗಿರುವಾಗ ಬಂದಿರುವ ಈ ಮಹಾತ್ಮನು ದೇವಾಂಶ ಸಂಭೂತನೇ ಆಗಿರಬೇಕು ಈತನು ಇಷ್ಟೊಂದು ಶಾಂತಚಿತ್ತನಾಗಿಯೂ, ಹಸನ್ಮುಖಿಯಾಗಿಯೂ ಇರುವಾಗ ಈತನೇನೂ ನನಗೆ ಕೇಡನ್ನು ಖಂಡಿತವಾಗಿ ಮಾಡಲಾರನೆಂದು ಸುವರ್ಣಶೇಖರನು ಕಡೆಗೆ ಧೈರ್ಯ ತಂದುಕೊಂಡನು

ಕೊಠಡಿಯ ನಾಲ್ಕೂ ಕಡೆಗೂ ನೋಡುತ್ತ ಮಂದಹಾಸಯುಕ್ತನಾಗಿರುವ ಆ ದೈವಾಂಶ ಪುರುಷನು ಇವನನ್ನು ಕುರಿತು, “ಏನಯ್ಯಾ, ಸುವರ್ಣಶೇಖರನೆ, ನೀನು ಒಳ್ಳೆಯ ಐಶ್ವರ್ಯವಂತನು ನಿನ್ನಂತೆ ಇಷ್ಟೊಂದು ಐಶ್ವರ್ಯವನ್ನು ಶೇಖರಿಸಿ ಇಟ್ಟುಕೊಂಡಿರುವ ಪುರುಷನು ಇನ್ನೊಬ್ಬನಿರಲಾರನು ಎಂದನು. ಅದಕ್ಕೆ ಸುವರ್ಣಶೇಖರನು- “ಏನೋ ಶೇಖರಿಸಿದೇನೆ, ಆದರೂ ಅದೇನೂ ಬಹಳವಲ್ಲ ಅದನ್ನು ಕೂಡಿಡುವುದಕ್ಕೆ ನನ್ನ ಜೀವಮಾನವೆಲ್ಲಾ ಹಿಡಿದಿದೆ ಏನೋ ಒಂದು ಸಾವಿರ ವರ್ಷವಾದರೂ ಬದುಕಿದ್ದರ ಇದ್ದುದರಲ್ಲಿ ಸ್ವಲ್ಪ ಐಶ್ವರ್ಯ ಸಂಪಾದನೆ ಮಾಡಬಹುದು,” ಎಂದು ಅಸಮಾಧಾನದಿಂದ ಉತ್ತರಕೊಟ್ಟನು. “ಓಹೋ ! ಹಾಗಾದರೆ ನಿನಗೆ ಇನ್ನೂ ತೃಪ್ತಿಯಿಲ್ಲ,” ಎಂದು ಆತನು ಆಶ್ಚರ್ಯಪಡಲು, “ತೃಪ್ತಿಯೆಲ್ಲಿಯದು ? ಸರಿ,” ಎಂದು

ಸುವರ್ಣಶೇಖರನು ತಲೆದೂಗಿದನು ಆ ದೈವಾಂಶ ಪುರುಷನು ಆತನನ್ನು ಕುರಿತು, "ಹಾಗಾದರೆ ನಿನಗೆ ಏತರಿಂದ ತೃಪ್ತಿಯಾಗುವುದು? ಎಲ್ಲಿ, ನೋಡೋಣ, ತಮಾಷೆಗಾದರೂ ಹೇಳು" ಎಂದನು. ಸುವರ್ಣಶೇಖರನು ಹೇಳುವುದಕ್ಕೆ ಮನಸ್ಸು ಬಾರದೆ ಸ್ವಲ್ಪಕಾಲ ಸುಮ್ಮನಿದ್ದನು ಆದರೆ ಬಂದಿರುವ ಮಹಾತ್ಮನು ತನ್ನನ್ನು ಅನುಗ್ರಹಿಸುವುದಕ್ಕಾಗಿಯೇ ಹೀಗೆ ಹೇಳುತ್ತಿರಬಹುದೆಂದು ಭಾವಿಸಿ, ಕಾಲಹರಣಮಾಡಿದರೆ ಸಮಯವು ತಪ್ಪಿಹೋದೀತೆಂದು ಚಿಂತಿಸುತ್ತ, "ಕೇಳಲೇ, ಬೇಡವೇ? ಹೇಗೆ ಕೇಳುವುದು? ಎಷ್ಟು ಬೇಕೆಂದು ಹೇಳುವುದು?" ಎಂದು ಸುವರ್ಣಶೇಖರನು ಡೋಲಾಯಮಾನಮಾನಸನಾಗಿದ್ದನು ಕಡೆಗೆ ಒಂದು ಒಳ್ಳೆಯ ಯೋಚನೆಯು ಆತನ ಮನಸ್ಸಿಗೆ ಹೊಳೆದು "ಇದಾದರೆ ಸರಿ, ಇದನ್ನೇ ಹೇಗಾದರೂ ಕೇಳಬೇಕು" ಎಂದುಕೊಂಡು, ತಲೆಯನ್ನು ಎತ್ತಿ, ಅಪರಿಚಯಸ್ಥನ ಮುಖವನ್ನೇ ನೋಡಲಾರಂಭಿಸಿದನು. ಆಗ ಆ ಮಹಾಪುರುಷನು ಸುವರ್ಣಶೇಖರನನ್ನು ಕುರಿತು, "ಏನಯ್ಯಾ, ಅರಸ, ಕಡೆಗೆ ಏನೋ ಒಂದು ತೃಪ್ತಿಕರವಾದ ತೀರ್ಮಾನವನ್ನೇ ಮಾಡಿದಂತಿರುವೆ, ಅದೇನು? ನಿನ್ನ ಇಷ್ಟವನ್ನು ತಿಳಿಸು. ಎಂದನು ಅದಕ್ಕೆ ಸುವರ್ಣಶೇಖರನು "ಎಲೈ ಮಹಾತ್ಮನ, ವಿಶೇಷವೇನೂ ಇಲ್ಲ ಇಷ್ಟೊಂದು ಕಷ್ಟಪಟ್ಟುಕೊಂಡು ಈ ಚಿನ್ನವನ್ನು ಕೂಡಿಹಾಕುವುದು ನನಗೆ ಬಹು ಬೇಸರವಾಗಿದೆ. ಇಷ್ಟಾಗಿಯೂ ಕೂಡಿಹಾಕಿರುವ ರಾಶಿಯೂ ಸ್ವಲ್ಪವೆ. ನಾನು ಮುಟ್ಟಿದುದೆಲ್ಲವೂ ಚಿನ್ನವಾಗುತ್ತ ಹೋದರೆ ಸಾಕು" ಎಂದನು. ಇದನ್ನು ಕೇಳಿ ಆ ಮಹಾತ್ಮನು ಮುಗುಳುನಗೆ ನಕ್ಕು, "ಸುವರ್ಣಸ್ಪರ್ಶವೆ! ಶಹಬಾಸ್, ಸುವರ್ಣಶೇಖರನೆ, ಶಹಬಾಸ್! ಒಳ್ಳೆಯ ಯೋಚನೆಯನ್ನೇ ಮಾಡಿದೆ ಇಂತಹ ಯೋಚನೆಯು ಹೊಳೆದುದು ಅಸಾಧಾರಣವೇ ಸರಿ.

ಆದರೆ ಈ ಸುವರ್ಣಸ್ಪರ್ಶದಿಂದ ನಿನ್ನ ಮನಸ್ಸು ತೃಪ್ತಿಗೊಳ್ಳು ವುದೆ ?'' ಎಂದನು ಅದಕ್ಕೆ ಸುವರ್ಣಶೇಖರನು, "ತೃಪ್ತಿಗೊಳ್ಳದೆ ಹೋಗುವುದು ಹೇಗೆ ?'' ಎಂದು ಪ್ರತ್ಯುತ್ತರ ಕೊಟ್ಟನು "ಹಾಗಾದರೆ ಅಂತಹ ಶಕ್ತಿಯೊಂದು ನಿನಗೆ ಬಂದರೆ ನೀನು ಬೇರೆ ದುಃಖಪಡುವುದಿಲ್ಲವಲ್ಲವೆ ?'' ಎಂದು ಆ ಮಹಾತ್ಮನು ಪುನಃ ಕೇಳಲು, ಅಗಕ್ಕೆ ಸುವರ್ಣಶೇಖರನು "ಎಲೈ ಮಹಾತ್ಮನೆ, ಇದೇನು ಹೀಗೆ ಹೇಳುವೆ ಸುವರ್ಣಸ್ಪರ್ಶವು ಹೇಗೆತಾನೆ ನನಗ ವ್ಯಸನವನ್ನುಂಟುಮಾಡೀತು ? ಇದು ಒಂದು ಇರುವ ಪಕ್ಷಕ್ಕೆ ನನಗೆ ಸಂಪೂರ್ಣ ಸುಖಹೊಂದುವುದಕ್ಕೆ ಬೇರೇ ಯಾವುದೂ ಬೇಡ'' ಎಂದು ಉತ್ತರ ಕೊಟ್ಟನು ಆಗ ಆ ಮಹಾಪುರುಷನು ಆತನನ್ನು ಕುರಿತು, "ಹಾಗೋ, ಆದರ ನಿನ್ನ ಇಷ್ಟದಂತಾಗಲಿ ನಾಳೆಯ ದಿನ ಸೂರ್ಯೋದಯದ ಕಾಲಕ್ಕೆ ನಿನಗ ಸುವರ್ಣ ಸ್ಪರ್ಶದ ವರವು ಸಿದ್ಧಿಸುವುದು'' ಎಂದು ಹೇಳಿ ಕಯ್ಗಳನ್ನು ತೂಗುತ್ತ ಅಂತರ್ಧಾನವಾದನು. ಹೀಗೆ ಆತನು ಅಂತರ್ಧಾನವಾ ಗುವ ಸಮಯದಲ್ಲಿ ಕೊಠಡಿಯಲ್ಲ ವಿಪರೀತವಾಗಿ ಬೆಳಕು ಹೆಚ್ಚಿ ನೋಡಲಾಗದೆ ಸುವರ್ಣಶೇಖರನು ಕಣ್ಣುಗಳನ್ನು ತಟಕ್ಕನೆ ಮುಚ್ಚಿಕೊಂಡನು ಪುನಃ ಕಣ್ಣನ್ನು ತೆರಯುವ ಹೊತ್ತಿಗೆ ತನ್ನ ಚಿನ್ನದ ರಾಶಿ ವಿನಾ ಬೇರಯೇನೂ ಕಾಣಲಿಲ್ಲ

ಆದಿನರಾತ್ರಿ ಸುವರ್ಣಶೇಖರನು ನಿದ್ರೆಹೋದನೋ, ಎಚ್ಚ ತ್ತಿದ್ದನೋ ಗೊತ್ತಾಗಲಿಲ್ಲ ಮಗುವಿಗ ಮಾರನೆಯ ದಿವಸ ಏನಾ ದರೂ ಆಟದ ಸಾಮಾನನ್ನು ಕೊಡುತ್ತೇನೆಂದು ಹೇಳಿದರ ಅದು ಹೇಗ ರಾತ್ರಿಯೆಲ್ಲಾ ಅದರ ಧ್ಯಾನದಲ್ಲೇ ಇರುವುದೋ ಹಾಗೆಯೇ ಸುವರ್ಣಶೇಖರನೂ ಆರಾತ್ರಿ ಇದ್ದನು ಹಾಗೂ ಹೀಗೂ ರಾತ್ರಿ ಕಳೆಯಿತು ಅರುಣೋದಯವಾಗುವ ಹೊತ್ತಿಗೆ ಸುವರ್ಣಶೇಖ ರನು ಎಚ್ಚತ್ತು ಹಾಸುಗೆಯ ಮೇಲೆ ಮಲಗಿದ್ದ ಹಾಗೆಯೇ

ಸುತ್ತುಮುತ್ತಲೂ ಕಣ್ಣುಗಳನ್ನು ಚಾಚಿದನು. ಮಹಾತ್ಮನ ಮಾತಿನ ಮೇರೆಗೆ ತನಗೆ ಸುವರ್ಣಸ್ಪರ್ಶವು ಇನ್ನೂ ಪ್ರಾಪ್ತವಾಗಿದೆಯೋ, ಇಲ್ಲವೋ ನೋಡಬೇಕೆಂಬ ಆತುರವು ಸುವರ್ಣಶೇಖರನಿಗೆ ಅಧಿಕವಾಗಿದ್ದಿತು. ಆದುದರಿಂದಲೇ ಆತನು ಮಂಚದ ಮಗ್ಗುಲಲ್ಲಿರುವ ಕುರ್ಚಿಯನ್ನೂ, ಮೇಜನ್ನೂ, ಇತರ ಪದಾರ್ಥಗಳನ್ನೂ ಮುಟ್ಟಿ ನೋಡಿದನು. ಮುಟ್ಟಿದ ಕೂಡಲೆ ಒಂದು ಪದಾರ್ಥವಾದರೂ ಸುವರ್ಣವಾಗಿ ಬೇರ ಬದಲಾಯಿಸಲಿಲ್ಲ. ಇದರಿಂದ ಅವನಿಗೆ ಏನೂತೋರದೆ ತಾನು ಕಂಡುದೆಲ್ಲಾ ಸ್ವಪ್ನವೋ, ಏನೋ ಎಂದುಕೊಂಡು ತನ್ನನ್ನು ಅಪಹಾಸ್ಯಮಾಡುವುದಕ್ಕೆ ಆ ಮಹಾಪುರುಷನು ಬಂದುವೇಳೆ ಬಂದಿರಬಹುದೆಂದು ಭಾವಿಸಿಕೊಂಡನು.

## ಮೂರನೆಯ ಪ್ರಕರಣ.

ಇನ್ನೂ ಚನ್ನಾಗಿ ಬೆಳಗಾಗಲಿಲ್ಲ. ಸುವರ್ಣಶೇಖರನು ಆಶಾಭಗ್ನನಾಗಿ ಹಾಸುಗೆಯ ಮೇಲೆ ಮಲಗಿದ್ದಾನೆ. ಚಿಂತೆಯುಂಬುದು ನಿಮಿಷನಿಮಿಷಕ್ಕೆ ಹೆಚ್ಚುತ್ತಿದೆ. ಹೀಗೆಯೇ ಕೆಲವುಕಾಲ ಕಳೆದುದಾಯಿತು. ಇನ್ನೇನು ಬೆಳಕು ಹರಿಯಿತು. ಸೂರ್ಯರಶ್ಮಿಗಳು ಬೀಳುತ್ತಿವೆ. ಸುವರ್ಣಶೇಖರನು ಮಲಗಿರುವ ಕೊಠಡಿಯೊಳಕ್ಕೂ ಕಿಟಕಿಯಿಂದ ಸೂರ್ಯನ ಕಿರಣವೊಂದು ಬಿದ್ದಿದೆ. ಇದೇನು! ಓಹೋ! ಸುವರ್ಣಶೇಖರನ ಹಾಸುಗೆ, ಹೊದ್ದಿಕೆ, ಎಲ್ಲವೂ ಸುವರ್ಣಮಯವಾಗಿವೆ! ಇದನ್ನು ಕಂಡ ಸುವರ್ಣಶೇಖರನಿಗೆ ಉಂಟಾದ ಆನಂದವನ್ನು ಹೇಳತೀರದು. ಬಟ್ಟೆಯ ಒಂದೊಂದು ಎಳೆಯೂ ಚಿನ್ನವಾಗಿದೆ! ಆಹಾ! ಸುವರ್ಣಸ್ಪರ್ಶವೇ! ಸೂರ್ಯನ ರಶ್ಮಿಯು ಬೀಳುತ್ತಲೇ ಮಹಾತ್ಮನ ಅನುಗ್ರಹವು ಸಿದ್ಧಿಸಿತಲ್ಲಾ!

ಹೀಗೆ ಹಾಸುಗೆ ಹೊದ್ದಿಕೆಗಳೆಲ್ಲವೂ ಸುವರ್ಣಮಯವಾದ ಕೂಡಲೆ ಸುವರ್ಣಶೇಖರನು ಸಂಭ್ರಮದಿಂದ ದಿಗ್ಗನೆದ್ದು ಕೊಠಡಿ

ಯಲ್ಲಿ ನಾಲ್ಕೂ ಕಡೆಯೂ ತಡವುತ್ತ ಕಯ್ಗೆ ಸಿಕ್ಕಿದುದನ್ನೆಲ್ಲಾ ಮುಟ್ಟುತ್ತ ಹೋದನು ಮಂಚದ ಮರದ ಕಾಲನ್ನು ಮುಟ್ಟಿದನು, ಅದು ಕೂಡಲೆ ಚಿನ್ನದ ಕಂಬವಾಯಿತು ಅಲ್ಲಿದ್ದ ಪುಸ್ತಕವನ್ನು ಆಚೆಗೆ ತೆಗೆದಿಟ್ಟನು , ಅದೂ ಕೂಡಲೆ ಚಿನ್ನದ ಪುಸ್ತಕವಾಯಿತು ಬಿಸಿಲು ಚೆನ್ನಾಗಿ ಬೀಳಲೆಂದು ಕಿಟಕಿಗೆ ಹಾಕಿದ ತೆರೆಯನ್ನು ಎಳೆಯಲೆತ್ನಿಸಿದನು ಅದು ಕೂಡಲೆ ಚಿನ್ನವಾಗಿ ಕಯ್ಗೆ ಬಹು ಭಾರವಾಯಿತು. ಅಲ್ಲಿಂದ ಎದ್ದು ಅವಸರವಸರದಿಂದ ತನ್ನ ಬಟ್ಟೆಗಳನ್ನು ಹಾಕಿಕೊಂಡನು , ಅವೂ ಚಿನ್ನದ ಬಟ್ಟೆಗಳಾದವು ತನ್ನ ಮುದ್ದುಗುವರಿಯಾದ ಸುವರ್ಣಸುಂದರಿ ತನಗೆ ಕೊಟ್ಟಿದ್ದ ವಸ್ತ್ರವನ್ನು ಜೇಬಿನಿಂದ ತೆಗೆದನು ಅದೂ ಕೂಡಲೆ ಚಿನ್ನದ ವಸ್ತ್ರವಾಯಿತು. ಇದೇನು ! ಮಗಳು ಕೊಟ್ಟ ವಸ್ತ್ರವೂ ಒದಲಾಯಿಸಿ ಹೋಯಿತೇ ! ಚಿನ್ನದ ವಸ್ತ್ರಕ್ಕೆ ಬದಲಾಗಿ ತನ್ನ ಮಗಳ ವಸ್ತ್ರವು ಹಾಗೆಯೇ ಇದ್ದಿದ್ದರ ಚೆನ್ನಾಗಿತ್ತೆಂದು ಸುವರ್ಣಶೇಖರನು ಇದಕ್ಕೆ ಮಾತ್ರ ಸ್ವಲ್ಪ ನೊಂದುಕೊಂಡನು "ಇಷ್ಟು ಸ್ವಲ್ಪ ವಿಷಯಕ್ಕೆ ವ್ಯಸನಪಡುವುದೆ ? ಇದು ಸರಿಯಲ್ಲ'' ಎಂದು ಕೂಡಲೆ ಸಮಾಧಾನವನ್ನೂ ತಂದುಕೊಂಡನು ಇದಾದ ಮೇಲೆ ಅಲ್ಲಿರುವ ವಸ್ತುಗಳನ್ನು ಮತ್ತಷ್ಟು ಸ್ಪಷ್ಟವಾಗಿ ನೋಡಬೇಕೆಂದು ಸುವರ್ಣಶೇಖರನು ಜೇಬಿನಿಂದ ಕನ್ನಡಕವನ್ನು ತೆಗೆದು ಹಾಕಿಕೊಂಡನು ಅದೂ ಚಿನ್ನವಾಗಿ ಬದಲಾಯಿಸಿ ಹೋಗಿ, ಯಾವ ಪದಾರ್ಥವೂ ಕಾಣಿಸದಂತಾಯಿತು. ತೆಗೆದು ನೋಡಿದರೆ ಅದರ ಎರಡು ಕನ್ನಡಿಗಳೂ ಸಹ ಚಿನ್ನದ ತಗಡುಗಳಾಗಿದ್ದುವು "ಎಷ್ಟೇ ಐಶ್ವರ್ಯವಿದ್ದರೂ ಹಾಕಿಕೊಳ್ಳುವುದಕ್ಕೆ ಒಂದು ಜತೆ ಕನ್ನಡಕವಿಲ್ಲದ ಮೇಲೆ ಏನು ತಾನೆ ಮಾಡಲಾಗುವುದು ?' ಎಂದು ಸುವರ್ಣಶೇಖರನು ಸ್ವಲ್ಪ ಜುಗುಪ್ಸೆ ಪಟ್ಟುಕೊಂಡು ಕಡೆಗೆ " ಇರಲಿ, ಚಿಂತೆಯಿಲ್ಲ ಗುಲಾಬಿ ಹೂ ಇರುವ ಕಡೆಯಲ್ಲಿ ಮುಳ್ಳು ಹೇಗೆ ಇದ್ದೇ

ಇರುವುದೋ, ಹಾಗೆಯೇ ವಿಶೇಷ ಸುಖವಿರುವ ಕಡೆಗಳಲ್ಲಿ ಸ್ವಲ್ಪ ಕಷ್ಟವಿದ್ದೇ ಇರುತ್ತದೆ ಇಷ್ಟು ಸ್ವಲ್ಪಕ್ಕೆ ಬೇಜಾರು ಪಟ್ಟುಕೊಂಡರೆ ಹೇಗೆ ? ಸುವರ್ಣಸ್ಪರ್ಶವೇ ಪ್ರಾಪ್ತವಾಗಿರುವಾಗ ಗಾಜಿನ ಕನ್ನಡಕ ಒಂದು ಹೋದರೇನು ? ಕಣ್ಣುಗಳೇ ಹೋದಹಾಗಾಯಿತೇ ? ನನ್ನ ಕಣ್ಣುಗಳೇ ಸಾಕು ಕಾಣುವಷ್ಟು ನೋಡುತ್ತೇನೆ ಏನಾದರೂ ಓದಬೇಕಾದರೆ ನನ್ನ ಮುದ್ದುಗುವರಿ ನನಗೆ ಸಹಾಯ ಮಾಡುವಳು,'' ಎಂದು ಪುನಃ ತಾನೇ ಸಮಾಧಾನ ತಂದುಕೊಂಡನು.

ಸುವರ್ಣಶೇಖರನ ಸಂಭ್ರಮವು ಆತನನ್ನು ಎಲ್ಲಿಯೂ ಇರಗೊಡಿಸದು ಅರಮನೆಯ ಉಪ್ಪರಿಗೆಯನ್ನು ಬಿಟ್ಟು ಕೆಳಕ್ಕೆ ಇಳಿದುಬಂದನು ಹೀಗೆ ಬರುವಾಗ್ಗೆ ಮಹಡಿಯ ಮೆಟ್ಟಲುಗಳೂ, ಕಟಕಟೆಯೂ ಆತನ ಕೈಸೋಕಿದ ಕೂಡಲೆ ಸುವರ್ಣಮಯವಾದವು ಇದನ್ನು ನೋಡಿ ಸುವರ್ಣಶೇಖರನು ಹಿಗ್ಗಿದನು. ಅಲ್ಲಿಂದ ಹಿತ್ತಲು ಬಾಗಿಲಿನ ಅಗುಳಿಯನ್ನು ತೆಗೆದು ತೋಟದೊಳಕ್ಕೆ ಹೋದನು ಒಂದು ನಿಮಿಷದ ಹಿಂದೆ ಹಿತ್ತಾಳೆಯದಾಗಿದ್ದ ಅಗುಳಿಯು ಸುವರ್ಣಶೇಖರನ ಕೈಸೋಕುತ್ತಲೆ ಚಿನ್ನದ ಅಗುಳಿಯಾಯಿತು ತೋಟದಲ್ಲ ಎಲ್ಲೆಲ್ಲಿ ನೋಡಿದರೂ ಅರಳಿದ ಗುಲಾಬಿ ಹೂಗಳು ಸಾವಿರಾರು ತುಂಬಿದ್ದವು ಮೊಗ್ಗುಗಳಂತೂ ಲೆಕ್ಕವೇ ಇಲ್ಲ ಪುಷ್ಪಗಳ ವಾಸನೆ ಎಲ್ಲೆಲ್ಲಿಯೂ ತುಂಬಿಹೋಗಿದೆ " ಇಂತಹ ಪರಿಮಳಯುಕ್ತವಾದ ಮಂದಮಾರುತವೂ, ಕಣ್ಣಿಗೆ ಆನಂದವನ್ನೀಯುವ ಪುಷ್ಪಗಳ ಸಮೂಹವೂ ಇರುವ ತೋಟದಲ್ಲಿ ಕೆಲವು ಕಾಲವಿದ್ದು ಅನುಭವಿಸುವ ಸೌಖ್ಯಕ್ಕಿಂತಲೂ ಮಿಗಿಲಾದ ಸೌಖ್ಯವುಂಟೇ ! ಈ ಪುಷ್ಪಗಳು ಈಗಲೇ ಇಷ್ಟು ಅಂದವಾಗಿರುವಾಗ ಇವುಗಳ ಸೊಬಗನ್ನು ಹತ್ತರಷ್ಟು ಹೆಚ್ಚಿಸುವ ಶಕ್ತಿಯು ನನ್ನಲ್ಲಿದೆಯಲ್ಲವೆ! '' ಎಂದು

ಸುವರ್ಣಶೇಖರನು ಒಂದೊಂದು ಗಿಡದ ಸಮೀಪಕ್ಕೂ ಹೋಗಿ ಕಣ್ಣಿಗೆಬಿದ್ದ ಒಂದೊಂದು ಹೂವನ್ನೂ ಕಯ್ಯಿಂದ ಮುಟ್ಟುತ್ತಿದ್ದನು. ಸುವರ್ಣಶೇಖರನು ಮುಟ್ಟಿದ ಪ್ರತಿಯೊಂದು ಮೊಗ್ಗೂ, ಹೂ ಸಹ ಒಳಗಿರುವ ದುಂಬಿಗಳೊಂದಿಗೆ ಚಿನ್ನದ ಪುಷ್ಪಗಳಾಗಿ ಹೋದವು !

ಹೀಗೆ ಸುವರ್ಣಶೇಖರನು ಗಿಡದಿಂದ ಗಿಡಕ್ಕೂ ಒಳ್ಳಿಯಿಂದ ಬಳ್ಳಿಗೂ ಹೋಗುತ್ತಿರುವಾಗ ಪ್ರಾತಃಕಾಲದ ಭೋಜನದ ವೇಳೆಯಾಯಿತು ಅದಕ್ಕೆ ತಕ್ಕಹಾಗೆ ಸುವರ್ಣಶೇಖರನಿಗೂ ಒಳ್ಳೆಯ ತಂಗಾಳಿಯಲ್ಲಿ ಅಲೆದಲೆದು ಹಸಿವೂ ಅಧಿಕವಾಗಿದ್ದಿತು. ಆದುದರಿಂದ ಆತನು ಕೂಡಲೆ ಅರಮನೆಗೆ ಹೊರಟನು

## ನಾಲ್ಕನೆಯ ಪ್ರಕರಣ.

ಸುವರ್ಣಶೇಖರನು ಹೋಗುವ ಹೊತ್ತಿಗೆ ಎಲ್ಲವೂ ಬಡಿಸಿ ಸಿದ್ಧವಾಗಿದ್ದಿತು ಆತನು ಎಲೆಯ ಮುಂದೆ ಕುಳಿತು ತನ್ನ ಪುತ್ರಿಗಾಗಿಯೇ ಇದಿರುನೋಡುತ್ತಿದ್ದನು ಸುವರ್ಣಸ್ಪರ್ಶವನ್ನು ಪಡೆದ ಸುವರ್ಣಶೇಖರನಿಗೆ ಪ್ರತಿ ದಿವಸಕ್ಕಿಂತಲೂ ಆ ದಿನ ಹಾಗಳ ಮೇಲೆ ಮಮತೆ ಮತ್ತಷ್ಟು ಹೆಚ್ಚಾಗಿದ್ದಿತು ಆ ಹೊತ್ತಿಗೆ ಸರಿಯಾಗಿ ಸುವರ್ಣಸುಂದರಿ ಅಳುತ್ತ ತಂದೆಯ ಸಮೀಪಕ್ಕೆ ಬಂದಳು. ಇದುವರೆಗೆ ತನ್ನ ಪುತ್ರಿಯು ಅತ್ತುದನ್ನೇ ಕಾಣದ ಸುವರ್ಣಶೇಖರನಿಗೆ ಬಹಳ ಆಶ್ಚರ್ಯವಾಯಿತು ಮಗಳು ಒಂದಕೂಡಲೆ ಅವಳನ್ನು ಸಮಾಧಾನಮಾಡಲೆತ್ನಿಸಿ, ಅವಳ ಕೈಲಿದ್ದ ಗಾಜಿನ ಬಟ್ಟಲನ್ನು ಮುಟ್ಟಿದನು ಅದು ಕೂಡಲೆ ಚಿನ್ನದ ಬಟ್ಟಲಾಯಿತು ಏನೇನು ಮಾಡಿದರೂ ಸುವರ್ಣಸುಂದರಿಗೆ ಸಮಾಧಾನವಾಗಲಿಲ್ಲ ಆಗ ಅರಸನು, "ಮಗು, ಇದೇನು! ಎಂದೂ ಇಷ್ಟು ಹಟಮಾಡಿದವಳಲ್ಲವಲ್ಲಾ ! ಇದೇಕೆ ಇಷ್ಟು ಅಳುವೆ?" ಎಂದು

ಕೇಳಿದನು ಆಗ ಸುವರ್ಣಸುಂದರಿ ತನ್ನ ಸೀರೆಯ ಸೆರಗಿನಲ್ಲಿಟ್ಟುಕೊಂಡಿದ್ದ ಚಿನ್ನದ ಗುಲಾಬಿ ಹೂವನ್ನು ತಂದೆಗೆ ತೋರಿಸಿದಳು "ಅಹಹ! ಎಷ್ಟು ಸುಂದರವಾಗಿದೆ, ಇಂತಹ ಅಂದವಾದ ಚಿನ್ನದ ಪುಷ್ಪವನ್ನು ನೋಡಿ ಯಾರಾದರೂ ಅಳುವುದುಂಟೆ?" ಎಂದು ಕೇಳಿದನು ಅದಕ್ಕೆ ಆ ಬಾಲೆಯು ಬಿಕ್ಕಿಬಿಕ್ಕಿ ಅಳುತ್ತ, ಗದ್ಗದ ಸ್ವರದಿಂದಲೇ, "ಎಲೈ ತಂದೆಯೆ, ಇದು ಸುಂದರವಾದ ಪುಷ್ಪವೆಂದರೇನು? ಕೆಲಸಕ್ಕೆ ಬಾರದ ಹೂ ಇದರಲ್ಲಿ ಸ್ವಲ್ಪವಾದರೂ ವಾಸನೆ ಎಂಬುದೇ ಇಲ್ಲ ನಾನು ಎಂದಿನಂತೆ ಪ್ರಾತಃಕಾಲದಲ್ಲಿ ನಿನಗಾಗಿ ಒಳ್ಳೊಳ್ಳೆಯ ಹೂಗೊಂಚಲುಗಳನ್ನು ಕಿತ್ತು ತಂದು ಕೂಡಬೇಕೆಂದು ಹೋದೆನು ಆದರೆ ಯಾವ ಹೂವನ್ನು ಕಿತ್ತರೂ ವಾಸನೆಯೇ ಇರಲಿಲ್ಲ ಕಿತ್ತುಕಿತ್ತು ಪುಷ್ಪಗಳನ್ನು ಬಿಸುಟೆನು ಒಂದಕ್ಕಾದರೂ ಅದರ ಕಾಂತಿಯೇ ಇಲ್ಲ ಎಲ್ಲೆಲ್ಲಿ ನೋಡಿದರೂ ಹೂಗಳೆಲ್ಲವೂ ಹಳದಿಯಾಗಿವೆ! ಅವುಗಳ ವಾಸನೆಯೂ, ಅಂದವಾದ ಬಣ್ಣವೂ ಹೇಗೆ ಮಾಯವಾಗಿ ಹೋದುವೋ ಕಾಣೆ ಇನ್ನು ಆ ತೋಟದಿಂದ ಪ್ರಯೋಜನವೇನು? ನಿನಗೆ ನಿತ್ಯವೂ ತಂದುಕೊಡುತ್ತಿದ್ದಂತೆ ಸೊಗಸಾದ ಗುಲಾಬಿ ಹೂಗಳನ್ನು ಇನ್ನುಮೇಲೆ ಎಲ್ಲಿಂದ ತಂದುಕೊಡಲಿ! ನಾನು ತಂದ ಪುಷ್ಪಗಳೆಂದು ನೀನು ಮತ್ತಷ್ಟು ಪ್ರೀತಿಯಿಂದ ಆದರಿಸುತ್ತಿದ್ದೆಯಲ್ಲವೆ! ಈ ತೋಟವು ಹೀಗಾಗುವುದಕ್ಕೆ ಕಾರಣವೇನಿರಬಹುದು?" ಎಂದಳು ಅದಕ್ಕೆ ಸುವರ್ಣಶೇಖರನು ಮಗಳನ್ನು ಕುರಿತು ತಾನು ಮಾಡಿದ ಕೆಲಸವನ್ನು ಹೇಳಿಕೊಳ್ಳಲಾರದೆ, "ಎಲೇ ಮಗು, ಇದಕ್ಕಾಗಿ ಇಷ್ಟೊಂದು ಅಳುವುದೇ ಇಗೋ ನೋಡು, ಊಟಕ್ಕೆ ಎಲ್ಲವೂ ಬಡಿಸಿ, ಸಿದ್ಧವಾಗಿದೆ ಕೂತುಕೊಂಡು ಊಟಮಾಡು ಹಿಂದಿನ ಗುಲಾಬಿ ಹೂ ಸ್ವಲ್ಪ ಕಾಲಕ್ಕೆ ಬಾಡಿ ಹೋಗುತಿದ್ದಿತು ಇದು ಹಾಗಲ್ಲ, ನೋಡು! ಯಾವಾಗಲೂ ಹೀಗೆಯೇ ಇರುತ್ತದೆ"

ಎಂದು ಸಮಾಧಾನವನ್ನು ಹೇಳಿದನು ಅದಕ್ಕೆ ಆ ರಾಜಗುಮಾರಿ "ನನಗೆ ಈ ಹೂಗಳಂತೂ ಬೇಡ ಇವಕ್ಕೆ ವಾಸನೆಯೇ ಇಲ್ಲ ಮೂಸಿನೋಡಿದರೆ ಮೂಗಿಗ ಗಟ್ಟಿಯಾದ ರೇಖುಗಳು ಚುಚ್ಚಿಕೊಳ್ಳುತ್ತವೆ ಹಾಳು ಹೂಗಳಿಂದ ಏನು ಪ್ರಯೋಜನ?" ಎಂದು ಅವುಗಳನ್ನು ಬಿಸುಟುಬಿಟ್ಟಳು

ಈ ಗುಲಾಬಿ ಹೂವಿನ ಗಲಾಟೆಯಲ್ಲಿ ಗಾಜಿನ ಬಟ್ಟಲು ಚಿನ್ನದ ಬಟ್ಟಲಾದುದು ಕೂಡ ಸುವರ್ಣಸುಂದರಿಗೆ ಗೊತ್ತಾಗಲಿಲ್ಲ ಗೊತ್ತಾಗದಿದ್ದುದೂ ಒಳ್ಳೆಯದೇ ಆಯಿತು ಏಕೆಂದರೆ, ಬಟ್ಟಲಿನ ಮೇಲೆ ಚಿತ್ರಿತವಾಗಿದ್ದ ಗಿಡ ಬಳ್ಳಿಗಳನ್ನೇ ಯಾವಾಗಲೂ ನೋಡು ತ್ತಿರುತ್ತಿದ್ದವಳಿಗ ಈಗ ಚಿನ್ನವೇ ಕಾಣಿಸುವುದರಿಂದ ಮತ್ತಷ್ಟು ಅಳುವುದಕ್ಕೆ ಕಾರಣವಾಗುತ್ತಿದ್ದಿತು

ಸುವರ್ಣಶೇಖರನು ತುಪ್ಪದ ಬಟ್ಟಲನ್ನು ಎತ್ತಿಟ್ಟನು, ಅದು ಕೂಡಲೆ ಚಿನ್ನದ ಬಟ್ಟಲಾಯಿತು ಬಾಳೆಯೆಲೆಯನ್ನು ತನ್ನ ಮುಂದಕ್ಕ ಎಳೆದುಕೊಂಡನು, ಅದೂ ಚಿನ್ನದ ಎಲೆಯಾಯಿತು ಇದನ್ನು ನೋಡುತ್ತಲೆ ಅರಸನು ಆಶ್ಚರ್ಯಪಟ್ಟು "ಹೀಗಾದರ ಮುಂದೇನು ಗತಿ! ಈ ಪಾತ್ರೆಗಳನ್ನು ಇಡುವುದೆಲ್ಲಿ? ಇದನ್ನು ಜೋಪಾನವಾಗಿ ನೋಡಿಕೊಳ್ಳುವರು ಯಾರು?" ಎನ್ನುತ್ತಾ, ಬಟ್ಟಲಲ್ಲಿದ್ದ ಹಾಲನ್ನು ಸ್ವಲ್ಪ ಕುಡಿದನು ಆದರೆ ಅದು ಬಾಯಿಗ ಬದ್ದ ಕೂಡಲ ಸುವರ್ಣದ್ರಾವಕವಾಗಿ ಕಡೆಗ ಚಿನ್ನದ ಗಟ್ಟಿಯಾಯಿತು ಅನ್ನವನ್ನು ಮುಟ್ಟಿದನು ಅದು ತಕ್ಷಣವೇ ಚಿನ್ನದ ಅಗುಳಾಯಿತು "ಅಯ್ಯೋ! ಇನ್ನೇನು ಗತಿ! ನನಗೆ ಹೊಟ್ಟೆಗೆ ಆಹಾರ ದೊರೆಯುವ ಬಗೆ ಹೇಗೆ? ನಾನು ಜೀವಿ ಸುವುದು ತಾನೆ ಹೇಗೆ? ಒಳ್ಳೆಯ ಸಂಕಟ ಪ್ರಾಪ್ತವಾಯಿತಲ್ಲಾ!" ಎಂದುಕೊಂಡು ಸುವರ್ಣಶೇಖರನು ಎಲೆಯಲ್ಲಿದ್ದ ಬೂಂದಿ ಲಾಡು ಗಳನ್ನು ತೆಗೆದುಕೊಂಡನು ಅವೂ ಕೂಡಲೆ ಚಿನ್ನದ ಕಾಳಿನ

ಲಾಡುಗಳಾದವು ಒಡೆಯುವುದಕ್ಕೆ ಕೂಡ ಅವಕಾಶವಾಗಲಿಲ್ಲ ಹೀಗೆ ಆತನು ಎಲೆಯಲ್ಲಿದ್ದ ಯಾವಯಾವ ಪದಾರ್ಥವನ್ನು ಮುಟ್ಟಿದರೂ ಬಾಯಲ್ಲಿ ಹಾಕಿಕೊಂಡರೂ ಅದು ಕೂಡಲೆ ಚಿನ್ನವಾಗುತಲಿದ್ದುದರಿಂದ ಬಹು ಸಂಕಟಪಟ್ಟು "ಅಯ್ಯೋ! ವಿಧಿಯೇ! ನನ್ನನ್ನು ಇಂತಹ ದುಃಖಕ್ಕೆ ಗುರಿಮಾಡಿದೆಯಾ! ನಾನು ಬದುಕುವುದು ಹೇಗೆ? ಬದುಕಿದ್ದರಲ್ಲವೇ ಈ ಚಿನ್ನದಿಂದ ನನಗೆ ಪ್ರಯೋಜನ! ಆಹಾರವೇ ಇಲ್ಲದ ಮೇಲೆ ಪ್ರಾಣಿಮಾತ್ರವು ಜೀವಿಸುವುದು ಹೇಗೆ? ಚಿನ್ನದ ದೋಸೆಗಿಂತಲೂ ಹಿಟ್ಟಿನ ದೋಸೆಯೇ ಒಳ್ಳೆಯದಲ್ಲವೆ? ಈ ಚಿನ್ನದ ಲಡ್ಡುಗಳಿಂದ ಏನು ಪ್ರಯೋಜನ!" ಎಂದು ಚಿಂತಿಸಲಾರಂಭಿಸಿದನು

ಸುವರ್ಣಸುಂದರಿ ತಂದೆಯ ಇದುರಿಗ ಕುಳಿತು ಭೋಜನವನ್ನು ಮಾಡುತ್ತಿದ್ದಳು ಅವಳಿಗೆ ಯಾವ ವ್ಯತ್ಯಾಸವೂ ತೋರಲಿಲ್ಲ ಎಂದಿನಂತೆ ಪದಾರ್ಥಗಳೆಲ್ಲವನ್ನೂ ಬೇಕಾದಷ್ಟು ತಿಂದಳು ಸುವರ್ಣಶೇಖರನು ಕಡೆಗೆ ಪಲ್ಯಗಳನ್ನಾದಗೂ ಬೇಗ ಬೇಗನ ನುಂಗಿಬಿಡಬೇಕೆಂದು, ಒಂದು ಸಣ್ಣ ಉರಳುಗಡ್ಡೆಯನ್ನು ತೆಗೆದು ಬಾಯಲ್ಲಿ ಹಾಕಿಕೊಂಡನು ಅದು ಕೂಡಲೆ ಚಿನ್ನವಾಗಿ ಬದಲಾಯಿಸಿದುದಲ್ಲದೆ ಒಹಳ ಬಿಸಿಯಾಗಿದ್ದುದರಿಂದ ಬಾಯನ್ನು ಸುಟ್ಟುಬಿಟ್ಟಿತು ಸುವರ್ಣಶೇಖರನು ನೋವನ್ನು ತಡೆಯಲಾರದೆ ಅರಚಿಕೊಳ್ಳುತ್ತಾ ಎಲೆಯನ್ನು ಬಿಟ್ಟು ಕೊಠಡಿಯಲ್ಲೆಲ್ಲಾ ಕಯ್ಕಾಲುಗಳನ್ನು ಬಡಿಯುತ್ತ ಕುಣಿಯಲಾರಂಭಿಸಿದನು ಇದನ್ನು ಸುವರ್ಣಸುಂದರಿ ನೋಡಿ ಗಾಬರಿಯಿಂದ, "ತಂದೆಯೇ, ಇದೇನು! ಹೀಗೆ ಮಾಡುವೆ? ಬಾಯಿ ಸುಟ್ಟುಹೋಯಿತೇ? ಕಾರಣವೇನು? ಏಕೆ ಹೀಗೆ ಸಂಕಟಪಡುತ್ತೀಯ?" ಎಂದಳು ಆಗ ಸುವರ್ಣಶೇಖರನು ಮಗಳನ್ನು ಕುರಿತು "ಎಲೈ ಕಂದ, ನಿನ್ನ ತಂದೆಯಗತಿ ಏನಾಗುವುದೋ, ಅವನು ಹೇಗೆ ಬದುಕುವನೋ,

ನಾನು ಕಾಣೆ" ಎಂದು ಹೇಳಿದನು. "ಅತಿ ಆಸೆ ಗತಿಕೆಡಿಸಿತು" ಎಂಬ ನಾಣ್ನುಡಿಯು ಸತ್ಯವಲ್ಲವೆ !

## ಐದನೆಯ ಪ್ರಕರಣ.

ಸುವರ್ಣಶೇಖರನ ಸ್ಥಿತಿಯನ್ನು ಕೇಳಿದರೆ ಎಷ್ಟು ದುಃಖವಾಗುತ್ತದೆ ! ಇದನ್ನು ಕಣ್ಣಾರ ಕಂಡಿದ್ದರಿನ್ನೆಷ್ಟು ದುಃಖವಾಗುತಲಿದ್ದಿತು ! ಪ್ರಪಂಚದಲ್ಲಿ ಯಾವುದರಿಂದಲೂ ಸಂಪೂರ್ಣ ಸುಖವಿಲ್ಲ ಸೌಂದರ್ಯ, ಸಂಪತ್ತು, ಶಕ್ತಿ, ಸಾಹಸ, ಪದವಿ ಯಾವುದೂ ಶಾಶ್ವತವಲ್ಲ ಒಂದೊಂದಕ್ಕೂ ಆಸೆಪಟ್ಟು ಅದಕ್ಕಾಗಿಯೇ ಪ್ರಾರ್ಥಿಸುವುದು ದಡ್ಡತನ ಸುವರ್ಣಶೇಖರನು ಸುವರ್ಣಸ್ಪರ್ಶವು ತನಗುಂಟಾದರ ಸಾಕೆಂದು ಹಾರೈಸುತ್ತಿದ್ದನು. ಅದೂ ಕೈಗೂಡಿತು ಆದರ ಅದರಿಂದಾದ ಅನರ್ಥಗಳೆಷ್ಟು ? ಬೇಕಾದಷ್ಟು ಚಿನ್ನವಿದ್ದರೂ ಏನಾದರೂ ಅವನಿಗೆ ಅದರಿಂದ ಪ್ರಯೋಜನವಾಯಿತೆ ? ಅವನಿಗಿಂತಲೂ ಬೀದಿಯಲ್ಲಿ ಅಲೆಯುವ ಭಿಕಾರಿಯೇ ಸುಖಿಯಲ್ಲವೆ ? ತನಗೆ ದೊರತ ಹಿಟ್ಟನ್ನಾದರೂ ನಿರಾತಂಕವಾಗಿ ತಿನ್ನುವನು ಸುವರ್ಣಶೇಖರನು ಹಸಿವನ್ನು ತಡೆವುದು ಹೇಗೆ ? ಹೀಗೆ ಅನ್ನನೀರಿಲ್ಲದೆ ಆತನು ಎಷ್ಟುಕಾಲ ಬದುಕಲಾದೀತು ? ಹೊಟ್ಟೆಗಿಲ್ಲದೆ ಸಾಯುವಗತಿ ಒಂದಿತಲ್ಲಾ ! ಇಂತಹ ಭೋಗ್ಯವಸ್ತುವೇ ಬೇಕೆಂದು ಪ್ರಾರ್ಥಿಸುವುದು ಮೂರ್ಖರ ಲಕ್ಷಣ. ಭಗವಂತನು ಕೊಟ್ಟುದರಲ್ಲಿ ಯಾವನು ತೃಪ್ತನಾಗಿ ಜೀವಿಸುವನೋ, ಅವನೇ ಸುಖಿ, ಅವನೇ ಧನ್ಯನು ಈ ಅಂಶಗಳನ್ನೇ ಸುವರ್ಣಶೇಖರನೂ ಯೋಚಿಸುತ್ತ ಹೋದನು. ಆದರೂ ತಿಂಡಿಗೋಸ್ಕರ ಸುವರ್ಣಸ್ಪರ್ಶವನ್ನು ಕಳೆದುಕೊಳ್ಳುವುದಕ್ಕೆ ಸುವರ್ಣಶೇಖರನ ಮನಸ್ಸು ಒಡಂಬಡುತ್ತಿರಲಿಲ್ಲ. ಒಂದಿಷ್ಟು ತಿಂಡಿಗಾಗಿ ಲಕ್ಷಾಂತರ ರೂಪಾಯಿ ಬೆಲೆತರುವ ಸುವರ್ಣಸ್ಪರ್ಶ

ವನ್ನು ಹೋಗಲಾಡಿಸಿಕೊಳ್ಳುವುದುಂಟೆ ? ಎಲ್ಲಿಯ ಮಾತು ? ಹೀಗೆ ಹೇಳುತ್ತಿರುವಾಗಲೂ ಸುವರ್ಣಶೇಖರನು ಹಸಿವು ಬಾಯಾರಿಕೆಗಳಿಂದ ಬಳಲುತ್ತಿದ್ದನು ನಿಮಿಷ ನಿಮಿಷಕ್ಕೆ ಹಸಿವು ಹೆಚ್ಚುತ ಹೋಯಿತು ಅರಸನು ಸಂಕಟಪಡುತ್ತಾ ಅರಚಲಾರಂಭಿಸಿದನು ಮಗಳಾದ ಸುವರ್ಣಸುಂದರಿಗೆ ಏನೂ ತೋರದೆ ತಂದೆ ಸಂಕಟಪಡುವುದನ್ನೇ ನೋಡುತ್ತಿದ್ದಳು ಏನು ಮಾಡಿಯಾಳು ? ಇನ್ನೂ ಬಾಲಿಕೆ ಹೀಗಾಗುವುದಕ್ಕೆ ಕಾರಣಗಳೇ ಅವಳಿಗೆ ತಿಳಿಯಲಿಲ್ಲ

ಕಡೆಗೆ ಆತನನ್ನು ಸಮಾಧಾನಗೊಳಿಸಬೇಕೆಂದು ಸುವರ್ಣಸುಂದರಿ ತಂದೆಯನ್ನು ಪ್ರೀತಿಯಿಂದ ತಬ್ಬಿಕೊಂಡಳು. ಕೂಡಲೇ ಸುವರ್ಣಶೇಖರನೂ ಬಗ್ಗಿ ಮಗಳಿಗೆ ಮುತ್ತಿಟ್ಟು ಪ್ರೇಮದಿಂದ, "ಮಗು, ಸುವರ್ಣಸುಂದರಿ ! " ಎಂದು ಕರೆದನು ಆದರೆ ಅವಳಿಂದ ಉತ್ತರವೇ ಬರಲಿಲ್ಲ ಕಾರಣವೇನು ? ಅಯ್ಯೋ, ವಿಧಿಯೇ ! ಸುವರ್ಣಸ್ಪರ್ಶದ ಮಹಿಮೆ ಎಂತಹದು ! ಯಾವುದನ್ನೂ ಬಿಡುವುದಿಲ್ಲವಲ್ಲಾ ! ಸುವರ್ಣಶೇಖರನ ಮೈಕೈಗಳು ಮಗಳಿಗೆ ಸೋಕಿದಕೂಡಲೆ ಅವಳೂ ಮಾರ್ಪಟ್ಟಳಲ್ಲಾ ! ಸುವರ್ಣಸುಂದರಿ ಸುವರ್ಣಸುಂದರಿಯೇ ಆದಳು ! ಅವಳ ಹೆಸರು ಅವಳಿಗ ಅನ್ವರ್ಥನಾಮವಾಯಿತು ಅವಳ ಗುಲಾಬಿಬಣ್ಣದ ಮುಖವೂ, ಕೆನ್ನೆಗಳೂ ಥಳಥಳಿಸುವ ಸುವರ್ಣವಾಗಿ ಬದಲಾಯಿಸಿ ಕಣ್ಣಿನಲ್ಲಿ ಸುರಿಯುತ್ತಿದ್ದ ನೀರು ಸಹಾ ಹಳದಿಬಣ್ಣದ ಹನಿಗಳಾದವು ತಲೆಯಲ್ಲಿದ್ದ ಹೂವಲೂ ಸಹ ಚಿನ್ನದ ಎಳೆಗಳಾದವು. ಮೃದುವಾದ ಆ ಮುದ್ದುಮಗಳ ಶರೀರವು ಕಲ್ಲಿನಂತೆ ಗಟ್ಟಿಯಾಗಿ ಅವಳು ಸುವರ್ಣಪ್ರತಿಮೆಯಾದಳು ಸುವರ್ಣಶೇಖರನ ದುರದೃಷ್ಟಕ್ಕೆ ಅವನಿಗಿದ್ದ ಒಬ್ಬ ಮಗಳೂ ಸುವರ್ಣಸ್ಪರ್ಶದ ಬಾಯಿಗೆ ತುತ್ತಾದಳು ದುರದೃಷ್ಟವು ಹೀಗೂ ಬಾಧಿಸುವುದುಂಟೇ ? ಇದನ್ನು ನೋಡಿದರ ಯಾರಿಗೆ ತಾನೇ ದುಃಖವುಂಟಾ

ಗುವುದಿಲ್ಲ ? ಸುವರ್ಣಶೇಖರನ ಪುತ್ರಿಯ ಆಕೃತಿಯು ಸ್ಪಷ್ಟವಾಗಿದೆ ಆದರೆ ಪ್ರಯೋಜನವೇನು ? ಕೆನ್ನೆಯಮೇಲಿನ ಹಳ್ಳವೂ ಕೂಡ ಹಾಗೆಯೇ ಕಾಣುತ್ತಿದೆ. ಮಾತುಕಥೆಗಳು ಮಾತ್ರವಿಲ್ಲ. ಮುದ್ದುಮಗಳನ್ನು ನೋಡಿದಷ್ಟೂ ಸುವರ್ಣಶೇಖರನ ದುಃಖವು ಅಪಾರವಾಗುತ್ತಹೋಯಿತು ಸುವರ್ಣಶೇಖರನು ಅವಳನ್ನು ನೋಡಿದಾಗಲೆಲ್ಲಾ, "ನನ್ನ ಮಗಳು ಅವಳ ತೂಕದ ಚಿನ್ನದ ಬೆಲೆಗೆ ಸಮಾನ" ಎಂದು ಹೇಳುತ್ತಿದ್ದನು ಈಗ ಹಾಗೆಯೇ ಆಗಿಹೋಯಿತೇ ! "ಕೆಟ್ಟಮೇಲೆ ಬುದ್ಧಿ ಬಂದಿತು ಅಟ್ಟಮೇಲೆ ಒಲೆ ಉರಿಯಿತು ' ಎಂಬ ಗಾದೆಗೆ ಸರಿಯಾಗಿ ಸುವರ್ಣಶೇಖರನಿಗೆ ಈಗ ಜ್ಞಾನೋದಯವಾಯಿತು ಈಗ ಅವನಿಗೆ ತನ್ನ ಐಶ್ವರ್ಯವೆಲ್ಲಕ್ಕಿಂತಲೂ ಮಗಳೇ ಹೆಚ್ಚೆಂದು ಚನ್ನಾಗಿ ತೋರಿತು.

ಮಕ್ಕಳಿರಾ, ಸುವರ್ಣಶೇಖರನ ಸ್ಥಿತಿಯನ್ನು ನೋಡಿದಿರಾ! ಎಷ್ಟು ಶೋಚನೀಯವಾಗಿದೆ ! ಅವನಿಗಿದ್ದ ಒಬ್ಬಮಗಳು ಚಿನ್ನದ ಬೊಂಬೆಯಾಗಿ ಹೋದಳು ಅವಳನ್ನು ನೋಡಿ ಸುವರ್ಣಶೇಖರನು ಕೈಕೈ ಮುರಿದುಕೊಳ್ಳುತ್ತಾನೆ ಮಗಳನ್ನು ನೋಡಲಾರ, ನೋಡದಿರಲಾರ ನೋಡಿದಾಗಲೆಲ್ಲಾ ದುಃಖವು ಇಮ್ಮಡಿಯಾಗುತ್ತಿದೆ ಈ ದುರವಸ್ಥೆಯಲ್ಲಿರುವುದಕ್ಕಿಂತಲೂ ದರಿದ್ರಾವಸ್ಥೆಯಲ್ಲಿರುವುದೇ ಲೇಸೆಂದು ಸುವರ್ಣಶೇಖರನು ಭಾವಿಸಿದನು ತನ್ನ ಐಶ್ವರ್ಯವೆಲ್ಲಾ ಹೋದರೂ ಹೋಗಲಿ, ತಾನು ವೃದ್ಧಿಯಲ್ಲಿಲ್ಲಾ ಕೇವಲ ದರಿದ್ರನಾಗಿ ಬಾಳಿದರೂ ಚಿಂತೆಯಿಲ್ಲ. ತನ್ನ ಮುದ್ದುಮಗಳು ಪುನಃ ಜೀವಿತಳಾದರೆ ಸಾಕೆಂದು ಅಂದುಕೊಂಡನು.

## ಆರನೆಯ ಪ್ರಕರಣ.

ಹೀಗೆ ಅರಸು ನಿರಾಶನಾಗಿ ದಿಕ್ಕುತೋರದೆ ಗೋಳಿಡುತ್ತಿರುವಾಗ ಇದ್ದಕ್ಕಿದ್ದಹಾಗೆಯೇ ಬಾಗಿಲ ಬಳಿ ಅಪರಿಚಯಸ್ಥನೊ

ಬ್ಬನು ಗೋಚರನಾದನು. ಆ ಮಹಾತ್ಮನನ್ನು ನೋಡಿದಕೂಡಲೆ ಸುವರ್ಣಶೇಖರನು ಮಾತನಾಡದೆ ನಾಚಿಕೆಯಿಂದ ತಲೆಯನ್ನು ತಗ್ಗಿಸಿದನು ತನ್ನ ನಿಧಿಯಿದ್ದ ಕೊರಡಿಯಲ್ಲಿ ಹಿಂದಿನ ದಿನ ತನ್ನ ಕಣ್ಣಿಗೆ ಕಾಣಿಸಿಕೊಂಡ ಮಹಾಪುರುಷನೇ ಆತನೆಂಬುದು ಅವನ ಮನಸ್ಸಿಗೆ ಹೊಳೆಯಿತು ತನ್ನ ಕಷ್ಟಗಳಿಗೆಲ್ಲ ಕಾರಣವಾದ ಸುವರ್ಣಸ್ಪರ್ಶವನ್ನು ಅನುಗ್ರಹಿಸಿದ ಪಾತ್ರವು ಆತನೇ ಎಂಬುದೂ ಗೊತ್ತಾಯಿತು ಆ ಮಹಾತ್ಮನು ಮಂದಹಾಸಯುಕ್ತನಾಗಿದ್ದನು ಅದರಿಂದ ಕೊರಡಿಯೆಲ್ಲವೂ ಸುವರ್ಣಕಾಂತಿಯಿಂದ ಹೊಳೆಯುತ್ತಿದ್ದಿತು ಮೊದಲೇ ಸುವರ್ಣವಾಗಿ ಮಾರ್ಪಟ್ಟಿದ್ದ ಪದಾರ್ಥಗಳೆಲ್ಲವೂ ಮತ್ತಷ್ಟು ಕಾಂತಿಯಿಂದ ಪ್ರಕಾಶಿಸಿದವು

"ಏನಯ್ಯಾ, ಸುವರ್ಣಶೇಖರನೇ, ಸುವರ್ಣಸ್ಪರ್ಶದ ಮಾಹಾತ್ಮ್ಯಯು ಹೇಗಿದೆ ? ನಿನ್ನ ಮನಸ್ಸಿಗೆ ಈಗಲಾದರೂ ತೃಪ್ತಿಯಾಯಿತಷ್ಟೆ?" ಎಂದು ಆ ಮಹಾತ್ಮನು ಕೇಳಿದನು ಸುವರ್ಣಶೇಖರನು ಮಾತನಾಡದೆ ತಲೆಯನ್ನು ತೂಗುತ್ತಾ, "ಅಯ್ಯೋ! ನಾನು ಬಹಳ ದುಃಖಪಡುತ್ತಿದ್ದೇನೆ" ಎಂದು ಹೇಳಿದನು. ಅದಕ್ಕೆ ಆ ಮಹಾಪುರುಷನು "ದುಃಖವೇ? ಇದೇನು, ಆಶ್ಚರ್ಯ! ಅಂತಹ ದುಃಖಕ್ಕೆ ಕಾರಣವೇನಿದೆ ನಾನೇನೋ ನೀನು ಕೇಳಿದುದನ್ನು ಕೊಟ್ಟೆನಲ್ಲವೆ? ಅದರಿಂದ ನಿನ್ನ ಮನೋರಥಗಳು ನೆರವೇರಲಿಲ್ಲವೋ?" ಎಂದು ಕೇಳಿದನು ಆಗ ಅರಸು, "ಎಲೈ ಮಹಾತ್ಮನೆ, ಹಣವೇ ಮನುಷ್ಯನಿಗೆ ಸರ್ವಸ್ವವಲ್ಲ ಚಿನ್ನವಿದ್ದ ಮಾತ್ರಕ್ಕೆ ಸಮಸ್ತವೂ ಇದ್ದಂತಾಗುವುದಿಲ್ಲ. ನನಗೆ ಬೇಕಾದ ಪದಾರ್ಥಗಳು ಒಂದೂ ನನಗೆ ದೊರೆಯದಂತಾಗಿದೆ," ಎಂದನು "ಅಹ! ಹಾಗೆಯೇ! ನಿನ್ನೆಯಿಂದೀಚೆಗೆ ನೀನು ಹೊಸ ವಿಷಯವನ್ನು ಕಂಡುಕೊಂಡಹಾಗಿದೆ. ಇಲ್ಲಿ ನೋಡು! ಸುವರ್ಣಸ್ಪರ್ಶವು ಶ್ರೇಷ್ಠವೊ, ಒಂದು ಬಟ್ಟಲು ಶುದ್ಧ

ವಾದ ನೀರು ಶ್ರೇಷ್ಠವೋ? ಇವೆರಡರಲ್ಲಿ ಯಾವುದು ನಿನಗೆ ನಿಜವಾಗಿಯೂ ಹೆಚ್ಚು ಪ್ರಯೋಜನಕಾರಿ ಎಂದು ತೋರುತ್ತದೆ?'' ಎಂದು ಆತನು ಪ್ರಶ್ನೆಮಾಡಿದನು. ಅದಕ್ಕೆ ಸುವರ್ಣಶೇಖರನು, “ಆಹಾ! ನಿರ್ಮಲೋದಕವೇ! ಸಮಸ್ತಲೂ ಪ್ರಪಂಚದಲ್ಲಿ ಶ್ರೇಷ್ಠವಾದ ವಸ್ತುವಿನ್ನೊಂದಿದೆಯೆ? ಎಂದು ನಿಟ್ಟುಸಿರುಬಿಟ್ಟನು.

“ಸುವರ್ಣಶೇಖರನೇ, ನಿನಗೆ ಸುವರ್ಣಸ್ಪರ್ಶವೇ ಬೇಕೋ, ರೊಟ್ಟಿಯ ಚೂರು ಸಿಕ್ಕಿದರೆ ಸಾಕೋ?'' ಎಂದು ಪುನಃ ಆ ಅಪರಿಚಯಸ್ಥನು ಕೇಳಲು ಅದಕ್ಕೆ ಸುವರ್ಣಶೇಖರನು, “ಪ್ರಪಂಚದ ಚಿನ್ನವನ್ನೆಲ್ಲ ಸೇರಿಸಿದರೂ ಒಂದು ರೊಟ್ಟಿಯ ತುಂಡಿಗೆ ಸಮಾನವಾದೀತೇ?'' ಎಂದು ಉತ್ತರಕೊಟ್ಟನು. ಇನ್ನೂ ಪರೀಕ್ಷಿಸಿ ನೋಡೋಣವೆಂದು ಆ ಮಹಾತ್ಮನು ಪುನಃ ಸುವರ್ಣಶೇಖರನನ್ನು ಕುರಿತು, “ಸುವರ್ಣಸ್ಪರ್ಶವೇ ಇರಲೊ, ಅದಕ್ಕೆ ಪ್ರತಿಯಾಗಿ ನಿನ್ನ ಮುದ್ದುಗುವರಿಯಾದ ಸುವರ್ಣಸುಂದರಿಯು ಸಜೀವಳಾದರೆ ಸಾಕೊ?'' ಎಂದು ಕೇಳಿದನು. ಆಗ ಸುವರ್ಣಶೇಖರನು “ಹಾ! ನನ್ನ ಮುದ್ದು ಕಂದಾ! ನನ್ನ ಪ್ರಾಣ ಪದಕವೆ! ಭೂಮಿಯೇ ಚಿನ್ನದ ಗಟ್ಟಿಯಾಗಿ ಅದರ ಬೆಲೆಯನ್ನು ನಿನಗಾಗಿ ಕೊಡುತ್ತೇನೆಂದರೂ ನಾನು ನಿನ್ನನ್ನು ಬಿಟ್ಟಿರುವುದಕ್ಕೆ ಸಮ್ಮತಿಸುತ್ತಿರಲಿಲ್ಲವಲ್ಲಾ!''ಎಂದು ಕೈಗಳನ್ನು ಮುಗಿದುಕೊಂಡನು. ಆಗ ಆ ಮಹಾಪುರುಷನು ಅರಸನನ್ನು ಕುರಿತು “ಎಲೈ ಸುವರ್ಣಶೇಖರನೆ,ನಿನಗೆ ಈಚೆಗೆ ಜ್ಞಾನೋದಯವಾದಂತೆ ತೋರುತ್ತದೆ. ನಿನ್ನ ಹೃದಯವಿನ್ನೂ ಚಿನ್ನದ ಗಟ್ಟಿಯಾದಂತೆ ಕಾಣುವುದಿಲ್ಲ. ಹಾಗಿದ್ದರಂತೂ ನಿನ್ನ ಆಸೆಯೇ ಇರುತ್ತಿರಲಿಲ್ಲ. ಸಮಸ್ತ ಜನರೂ ರಾತ್ರಿ ಹಗಲು ಕಷ್ಟಪಟ್ಟು ಸಂಪಾದಿಸಬೇಕೆಂದು ಪ್ರಯತ್ನಪಡುವ ಚಿನ್ನ ಬೆಳ್ಳಿಗಿಂತಲೂ, ಸಮಸ್ತರಿಗೂ ಸುಲಭಸಾಧ್ಯವಾಗಿರುವ ವಸ್ತುಗಳೇ ಹೆಚ್ಚು ಪ್ರಯೋಜನವುಳ್ಳವುಗಳೆಂಬುದು ಈಗಲಾದರೂ ನಿನಗೆ

ತಿಳಿಯಿತೆ? ಎಲ್ಲಿ, ಈಗ ಮನಃಪೂರ್ವಕವಾಗಿ ಹೇಳು ಈ ಸುವರ್ಣ ಸ್ಪರ್ಶವು ಹೋದರ ಸಾಕೆಂದು ನಿನಗ ಅಭಿಪ್ರಾಯವಿದೆಯೆ'' ಎಂದು ಕೇಳಿದನು ಅದಕ್ಕೆ ಸುವರ್ಣಶೇಖರನು. ''ಸುವರ್ಣ ಸ್ಪರ್ಶವೆಂಬ ಮಾತು ಕೇಳಿದರ ನನಗೆ ಸಹಿಸದಂತಾಗಿದೆ, ಎಂದನು ಅಷ್ಟು ಹೊತ್ತಿಗ ಸುವರ್ಣಶೇಖರನ ಮೂಗಿನ ಮೇಲೆ ಒಂದು ನೊಣವು ಬಂದು ಕುಳಿತುಕೊಂಡು ಕೂಡಲೆ ಥಳಥಳಿಸುತ್ತಿದ್ದಿತು. ಅದೂ ಚಿನ್ನವಾಗಿ ಬದಲಾಯಿಸಿದ್ದುದರಿಂದ ಸುವರ್ಣಶೇಖರನಿಗ ಮೈನಡುಕ ಹತ್ತಿತು ಇದನ್ನು ನೋಡಿ ಆ ಮಹಾನುಭಾವನು, ''ಎಲೈ ಸುವರ್ಣಶೇಖರನ, ನಿನಗ ಈ ಸುವರ್ಣಸ್ಪರ್ಶವು ಬೇಡ ದಿದ್ದರೆ ನಿನ್ನ ತೋಟದ ಮಗ್ಗುಲಲ್ಲಿ ಹರಿಯುವ ನದಿಯಲ್ಲಿ ಹೋಗಿ ಮುಳುಗು ಸ್ನಾನವಾದ ತರುವಾಯು ಆ ಜಲವನ್ನು ಒಂದು ಪಾತ್ರೆಯಲ್ಲಿ ಮನಗೆ ತಂದು ನಿನಗ ಯಾವ ಯಾವ ಪದಾರ್ಥ ಗಳು ಪುನಃ ಪೂರ್ವದ ಸ್ಥಿತಿಗ ಬರಬೇಕಂದು ಇಷ್ಟವಾಗುತ್ತದೆ ಯೋ ಅವುಗಳ ಮೇಲ ನೀರನ್ನು ಪ್ರೋಕ್ಷಿಸು ಇದನ್ನು ನೀನು ಭಕ್ತಿಪುರಸ್ಸರವಾಗಿ ಮಾಡಿದೆಯಾದರ ನಿನ್ನ ದುರಾಸೆಯಿಂದುಂ ಟಾದ ಸಂಕಟಕ್ಕೆ ಪ್ರತೀಕಾರವಾಗಬಹುದು,' ಎಂದು ಹೇಳಿ ದನು ಸುವರ್ಣಶೇಖರನು ನಾಚಿಕೆಯಿಂದ ತಲೆಯನ್ನು ತಗ್ಗಿಸಿ ಪುನಃ ಮೇಲಕ್ಕೆ ಎತ್ತಿ ನೋಡಲಾಗಿ ಆ ಸೂರ್ಯಸದೃಶನಾದ ಅಪರಿಚಯಸ್ಥನು ಅದೃಶ್ಯನಾಗಿದ್ದನು

## ಹನ್ನೆರಡನೆಯ ಪ್ರಕರಣ.

ಸುವರ್ಣಶೇಖರನು ಕೂಡಲೆ ಗಡಬಡಿಸಿಕೊಂಡು ಎದ್ದು ಒಂದು ಮಣ್ಣಿನ ಹೂಜಿಯನ್ನು ಕೈಯಲ್ಲಿ ಹಿಡಿದು ನದಿಯ ಬಳಿಗೆ ಹೊರಟನು ಆ ಹೂಜಿಯೂ ಸಹ ಚಿನ್ನದ ಹೂಜಿಯಾಯಿತು. ದಾರಿಯಲ್ಲಿ ಅವನ ಕೈಕಾಲಗೆ ತಗಲಿದ ಗಿಡಮರಗಳೆಲ್ಲವೂ ಚಿನ್ನ

ವಾದುವು ನದಿಗೆ ಹೋಗ ಕೂಡಲೇ ಮೈಮೇಲಿನ ಬಟ್ಟೆಯನ್ನೂ ಕೂಡ ತೆಗೆಯದೆ ನೀರಿನಲ್ಲಿ ಮುಳುಗಿದನು ಕೂಡಲೆ ತಲೆಯನ್ನೆತ್ತಿ, ''ಅಹಹ! ಎಷ್ಟು ಆನಂದವಾಗಿದೆ ಈ ಸ್ನಾನವು ಸುವರ್ಣ ಸ್ಪರ್ಶವನ್ನು ಸಂಪೂರ್ಣವಾಗಿ ನಾಶಪಡಿಸಿರಬಹುದು. ಇರಲಿ, ಈ ಪಾತ್ರೆಯಲ್ಲ ನೀರು ತುಂಬಿಕೊಳ್ಳುವ' ಎಂದು ಆ ಹೂಜಿಯಲ್ಲಿ ನೀರನ್ನು ತುಂಬಿಕೊಂಡನು ಹೀಗೆ ನೀರು ತುಂಬಿಕೊಳ್ಳುವುದಕ್ಕೆ ಪಾತ್ರೆಯನ್ನು ಅದ್ದಿದ ಕೂಡಲೆ ಅದು ಪೂರ್ವದ ಮಣ್ಣಿನ ಪಾತ್ರೆಯಾಯಿತು. ಅದನ್ನು ನೋಡಿ ಸುವರ್ಣಶೇಖರನು ಆನಂದ ಪರವಶನಾದನು. ಮನಸ್ಸಿನಲ್ಲಿಯೂ ಸಹ ಒಂದು ಬಗೆಯ ಭಾರವು ಕಡಿಮೆಯಾದಂತಾಯಿತು ಅಲ್ಲಿಂದ ಆತನು ಅಲ್ಲಿಯೇ ಬೆಳದಿದ್ದ ಗಿಡಬಳ್ಳಿಗಳ ಒಳಗೆ ಹೋಗಿ ಹೂ ಕಾಯಿಗಳನ್ನು ಮುಟ್ಟಿದನು ಅವು ಸ್ವಲ್ಪವೂ ವ್ಯತ್ಯಾಸ ಹೊಂದದೆ ಮೊದಲಿನಂತೆಯೇ ಇದ್ದುವು ಅದರಿಂದ ತನಗೆ ಪ್ರಾಪ್ತವಾಗಿದ್ದ ಸುವರ್ಣ ಸ್ಪರ್ಶದ ಪಾಪವು ಬಿಡುಗಡೆಯಾಯಿತೆಂದು ಧೈರ್ಯಮಾಡಿಕೊಂಡು ಅಲ್ಲಿಂದ ಅರಮನೆಗೆ ಅವಸರವಸರದಿಂದ ಹೊರಟನು. ಹೀಗೆ ಸುವರ್ಣಶೇಖರನು ಮಣ್ಣಿನ ಪಾತ್ರೆಯಲ್ಲಿ ನೀರು ತರುತ್ತಿದ್ದುದನ್ನು ನೋಡಿ ಅರಮನೆಯ ಚಾಕರರೆಲ್ಲರೂ ವಿಸ್ಮಿತರಾದರು. ಅರಸನು ಅರಮನೆಗೆ ಬಂದಕೂಡಲೆ ಆ ನೀರನ್ನು ತನ್ನ ಮುದ್ದುಗುವರಿಯ ಮೇಲೆ ಪ್ರೋಕ್ಷಿಸಿದನು ತಕ್ಷಣವೇ ಚಿನ್ನದ ಪ್ರತಿಮೆಯಂತಿದ್ದ ಸುವರ್ಣಸುಂದರಿಯ ಕೆನ್ನೆಗಳು ಗುಲಾಬಿ ಹೂವಂತೆ ಬಣ್ಣಹೊಂದಿ ಕೈಕಾಲುಗಳು ಅಲುಗಲಾರಂಭಿಸಿದುವು ಇನ್ನೂ ನೀರನ್ನು ಎರಚಲು, ''ಅಯ್ಯೋ. ತಂದೆಯೆ, ಇದೇನು, ಹೀಗೆ ನೀರು ಹಾಕುವೆ? ಈ ಹೊತ್ತು ತಾನೇ ಹಾಕಿಕೊಂಡ ಪಾವುಡೆಯು ಕೆಟ್ಟುಹೋಯಿತಲ್ಲಾ!'' ಎಂದಳು ಅವಳಿಗೆ ಬೇರೇ ತಾನು ಚಿನ್ನದ ಪ್ರತಿಮೆಯಾಗಿದ್ದುದು ಗೊತ್ತಾಗಲಿಲ್ಲ; ತಾನು

ವಿಷಯವೇ ಅವರಿಗ ಸ್ವಲ್ಪವೂ...ದು. ಸುವರ್ಣಶೇಖರನೂ ಮಗಳಿಗೆ ತನ್ನ ದಡ್ಡತನದ ವಿಷಯವಾಗಿ ಏನೂ ಹೇಳಲಿಲ್ಲ. ತನಗೆ ಆಗ ಪ್ರಾಪ್ತವಾಗಿದ್ದ ಶಕ್ತಿಯನ್ನು ಮಾತ್ರ ತೋರ್ಪಡಿಸಿದನು ಮಗಳಾದ ಸುವರ್ಣಸುಂದರಿಯನ್ನು ತೋಟದೊಳಕ್ಕೆ ಕರೆದು ಕೊಂಡು ಹೋಗಿ, ಅಲ್ಲಿರುವ ಪುಷ್ಪಗಳ ಮೇಲೆಲ್ಲಾ ನದಿಯಿಂದ ತಂದ ನೀರನ್ನು ಚಿಮುಕಿಸಿದನು ಸಾವಿರಾರು ಪುಷ್ಪಗಳೆಲ್ಲ ಏಕಕಾಲದಲ್ಲಿ ತಮ್ಮ ಪೂರ್ವಸ್ಥಿತಿಯನ್ನು ಪಡೆದು ಸುವಾಸನೆ ಯಿಂದ ಶೋಭಿಸಿದವು ಸುವರ್ಣಶೇಖರನು ತನ್ನ ಜೀವಮಾನ ದಲ್ಲೆಲ್ಲ ತನ್ನ ಸ್ಥಿತಿಯನ್ನು ಜ್ಞಾಪಿಸಿಕೊಳ್ಳುತ್ತಲೇ ಇದ್ದನು.

ಮಕ್ಕಳಿರಾ, ಸುವರ್ಣಶೇಖರನ ಕಥೆಯನ್ನು ಕೇಳಿದಿರಾ! ಎಷ್ಟು ಸ್ವಾರಸ್ಯವಾಗಿದೆ! ನಾನು ನಿಮಗೆ ಹೇಳಿದಂತೆಯೇ ತನ್ನ ಕಥೆಯನ್ನು ಸುವರ್ಣಶೇಖರನು ತನ್ನ ಮೊಮ್ಮಕ್ಕಳಿಗೆ ಆಗಾಗ್ಗೆ ಹೇಳುತ್ತಲೇ ಇದ್ದನು ಇಂತಹ ಕಥೆಯನ್ನು ನೀವು ಬೇರೆ ಇದು ವರೆಗೆ ಕೇಳಿರಲಾರಿರಿ ಈ ಕಥೆಯನ್ನು ಓದಿದ ಮೇಲೆ ನಿಮಗೆ ಸುವರ್ಣಸ್ಪರ್ಶದ ವರವು ಸಿದ್ಧಿಸಬೇಕೆಂದು ಆಶೆಯಾಗುವುದೇ? ಕೆಲ ವರಿಗೆ ಪದಾರ್ಥಗಳನ್ನು ಬಲಗೈಯಿಂದ ಮುಟ್ಟಿದರೆ ಅವು ಚಿನ್ನವಾ ಗುವುದೂ, ಪುನಃ ಬೇಕಾದಾಗ ಎಡಗೈಯಿಂದ ಮುಟ್ಟಿದರೆ ಮೊದಲಿನಂತಾಗುವುದೂ - ಈ ಎರಡು ಶಕ್ತಿಯೂ ಇದ್ದರೆ ಒಳ್ಳೆ ಯದೆಂದು ತೋರಬಹುದು ಆದರೆ ಅಂತಹ ಶಕ್ತಿಯನ್ನು ಕೊಡುವ ಮಹಾತ್ಮನನ್ನು ಬೇರೆ ನೀವು ಕಂಡು ಹಿಡಿಯಲಾರಿರಿ.

— 0 —